# ಸಿನಿಮಾ ಜೂಜಿನಲ್ಲಿ ದಣಿದ ದ್ವಾರಕೀಶ್



'ಕಲೆಯಲ್ಲಿ ಯಾರು ಬೇಕಾದ್ರೂ ಗೆಲ್ಲಬಹುದು. ಯಾರು ಬೇಕಾದ್ರೂ ಸೋಲಬಹುದು'– ಮೂರು ವರ್ಷಗಳ ಹಿಂದೆ ತಮ್ಮ 75ನೇ ಜನ್ಮದಿನದಂದು, ಬೆಂಗಳೂರಿನ ಬಿಟಿಎಂ ಬಡಾವಣೆಯ ತಮ್ಮ ಮನೆಯಲ್ಲಿ, ತೂಗುಯ್ಯಾಲೆಯಲ್ಲಿ ಮೆಲುವಾಗಿ ತೂಗುತ್ತ ಈ ಮಾತು ಹೇಳಿ ನಕ್ಕಿದ್ದರು ದ್ವಾರಕೀಶ್. ಇದು ಕಲೆಗಷ್ಟೇ ಅಲ್ಲ, ಬದುಕಿಗೂ ಅನ್ವಯಿಸುವ ಮಾತು. ಕಲೆಯ ಸೋಲು ಬದುಕನ್ನೂ ಹೇಗೆ ಸೋಲಿನ ಸುಳಿಗೆ ನೂಕುತ್ತದೆ ಎನ್ನುವುದಕ್ಕೆ ದ್ವಾರಕೀಶ್ ಬದುಕಿಗಿಂತ ಬೇರೆ ಉದಾಹರಣೆ ಬೇಕಿಲ್ಲ. ಇತ್ತೀಚೆಗೆ ದ್ವಾರಕೀಶ್ ತಮ್ಮ ಮನೆಯನ್ನು ಮಾರಿರುವ ಸುದ್ದಿ ಎಲ್ಲ ಕಡೆಗಳಲ್ಲಿಯೂ ಹರಿದಾಡುತ್ತಿದೆ.

ಸಂಕಷ್ಟ ದ್ವಾರಕೀಶ್‌ಗೆ ಹೊಸದೇನೂ ಅಲ್ಲ. ಮೈಸೂರಿನ ಗಾಂಧಿವೃತ್ತದಲ್ಲಿ ಆಟೊಮೊಬೈಲ್ ಅಂಗಡಿ ಇಟ್ಟಿದ್ದ ಕುಳ್ಳ ಗಾಂಧಿನಗರಕ್ಕೆ ಜಿಗಿದ ದಿನದಿಂದ ಇಲ್ಲಿಯವರೆಗೆ ಅವರು ಯಶಸ್ಸಿನ ಉತ್ತುಂಗವನ್ನೂ ಸೋಲಿನ ಪಾತಾಳವನ್ನೂ ಹಲವು ಸಲ ಮುಟ್ಟಿ ಬಂದಿದ್ದಾರೆ. 'ದ್ವಾರಕೀಶ್ ಕತೆ ಮುಗಿಯಿತು' ಎಂದು ಎಲ್ಲರೂ ಅಂದುಕೊಳ್ಳುವಾಗಲೇ ಚೆಂಡಿನ ಹಾಗೆ ಚಂಗನೆ ಜಿಗಿದು ಬಂದಿದ್ದಾರೆ.

ನಟನಾಗಿ ಚಂದನವನಕ್ಕೆ ಬಂದು, ನಿರ್ಮಾಪಕನಾಗಿ ನಂತರ ನಿರ್ದೇಶಕನಾಗಿ ಅವರು ಚಿತ್ರರಂಗಕ್ಕೆ ಕೊಟ್ಟಿರುವ ಕೊಡುಗೆ ದೊಡ್ಡದು. ನಿರ್ಮಿಸಿದ ಮೊದಲುಗಳು ಹಲವು. 1962ರಲ್ಲಿ 'ವೀರಸಂಕಲ್ಪ'ದ ಮೂಲಕ ನಟನಾದರು. 1966ರಲ್ಲಿ 'ಮಮತೆಯ ಬಂಧನ'ದ ಮೂಲಕ ನಿರ್ಮಾಪಕನಾದರು. 1985ರಲ್ಲಿ 'ನೀ ಬರೆದ ಕಾದಂಬರಿ' ಸಿನಿಮಾದ ಮೂಲಕ ನಿರ್ದೇಶಕರಾದರು. 'ಮೇಯರ್ ಮುತ್ತಣ್ಣ' ಸಿನಿಮಾದಲ್ಲಿ ಸಿಕ್ಕ ಪ್ರಚಂಡ ಯಶಸ್ಸಿನ ನಂತರ ಅವರು ತಿರುಗಿ ನೋಡಿದ್ದೇ ಇಲ್ಲ. ಒಂದರ ಹಿಂದೆ ಇನ್ನೊಂದರಂತೆ ಹಿಟ್ ಸಿನಿಮಾಗಳನ್ನು ಕೊಡುತ್ತಲೇ ಹೋದರು.

80 ಮತ್ತು 90ರ ದಶಕವಂತೂ ದ್ವಾರಕೀಶ್ ಸಿನಿಮಾಬದುಕಿನ ಉತ್ತುಂಗದ ಕಾಲ. ಒಂದು ಕಡೆ 'ಕುಳ್ಳ...' ಸರಣಿಯ ಚಿತ್ರಗಳು ಸೂಪರ್ ಹಿಟ್ ಆಗುತ್ತಿದ್ದವು. ಇನ್ನೊಂದು ಕಡೆ ಕನ್ನಡದ ಆಚೆಗೂ ಹಿಂದಿ, ತಮಿಳು, ತೆಲುಗು ಭಾಷೆಗಳಲ್ಲಿಯೂ ಸಿನಿಮಾ ಮಾಡುತ್ತಿದ್ದರು. ಆ ಅವಧಿಯಲ್ಲಿ ಅವರು ಇಪ್ಪತ್ತೈದಕ್ಕೂ ಹೆಚ್ಚು ಸೂಪರ್ ಹಿಟ್ ಸಿನಿಮಾಗಳನ್ನು ಕೊಟ್ಟರು.

ವಿದೇಶದಲ್ಲಿ ಮೊಟ್ಟಮೊದಲು ಕನ್ನಡ ಸಿನಿಮಾ ಚಿತ್ರೀಕರಿಸಿದ್ದು, ಕಿಶೋರ್ ಕುಮಾರ್ ಅವರನ್ನು ಕನ್ನಡಕ್ಕೆ ಮೊದಲು ತಂದದ್ದೂ ಸೇರಿದಂತೆ ಹಲವು ಮೊದಲುಗಳು ದ್ವಾರಕೀಶ್ ಹೆಸರಿನಲ್ಲಿವೆ.

ಹೀಗೆ ಯಶಸ್ಸಿನ ತುತ್ತತುದಿಯಲ್ಲಿದ್ದ ಅವರು ಜಾರಲಾರಂಭಿಸಿದ್ದು, 1990ರಲ್ಲಿ. 'ಆಫ್ರಿಕಾದಲ್ಲಿ ಶೀಲ' ಸಿನಿಮಾದ ಸೋಲು ಸಂಕಷ್ಟದ ಬದುಕಿನ ಮುನ್ನುಡಿಯಷ್ಟೇ ಆಗಿತ್ತು. ಆ ನಂತರ ಅವರು ಮಾಡಿದ ಸಿನಿಮಾಗಳೆಲ್ಲವೂ ಸೋಲಿನ ಕಹಿಯನ್ನೇ ಉಣಿಸಿದವು. ಗಾಂಧಿನಗರದ ಮಂದಿ 'ಆಫ್ರಿಕಾದಲ್ಲಿ ಶೀಲ; ಇಂಡಿಯಾದಲ್ಲಿ ಸಾಲ' ಎಂದು ಜೋಕ್ ಮಾಡಿಕೊಂಡು ನಗುವಷ್ಟರ ಮಟ್ಟಿಗೆ ದ್ವಾರಕೀಶ್ ದಿವಾಳಿಯಾಗಿದ್ದರು. ಆದರೆ ಇದರಿಂದ ಅವರ ಸಿನಿಮಾ ವ್ಯಾಮೋಹವೇನೂ ಕಡಿಮೆಯಾಗಲಿಲ್ಲ. ಮತ್ತೆ ಮತ್ತೆ ತಮ್ಮ ಅದೃಷ್ಟಪರೀಕ್ಷೆಯನ್ನು ಮಾಡುತ್ತಲೇ ಬಂದರು. ಆ ಅದೃಷ್ಟ ಮತ್ತೆ ಕೈ ಹಿಡಿಯಲು ಹದಿನೈದು ವರ್ಷ ಕಾಯಬೇಕಾಯ್ತುಷ್ಟೆ! 2005ರಲ್ಲಿ ತೆರೆಕಂಡ 'ಆಪ್ತಮಿತ್ರ' ಸಿನಿಮಾದ ಹಿಟ್ ದ್ವಾರಕೀಶ್ ಅವರಿಗೆ ಮರುಜೀವ ಕೊಟ್ಟಿತು. 2011ರಲ್ಲಿ ಅವರು ನಿರ್ಮಿಸಿದ 'ವಿಷ್ಣುವರ್ಧನ' ಸಿನಿಮಾ ಕೂಡ ದ್ವಾರಕೀಶ್ ಜೇಬನ್ನು ತುಂಬಿಸಿತು. 2015ರಲ್ಲಿ ತೆರೆಕಂಡ 'ಆಟಗಾರ'ನೂ ಅವರಿಗೆ ಮೋಸ ಮಾಡಲಿಲ್ಲ.

ಹೀಗೆ ಗತಕಾಲದ ವೈಭವವಿಲ್ಲದಿದ್ದರೂ ನೆಮ್ಮದಿಯ ಬದುಕಿನ ಹಳಿಗೆ ಮರಳಿದ್ದ ದ್ವಾರಕೀಶ್ ಬದುಕನ್ನು 'ಆಯುಷ್ಮಾನ್ ಭವ' ಸಿನಿಮಾದ ಸೋಲು ಮತ್ತೆ ಕಲುಕಿದೆ. ತಮ್ಮ 78ನೇ ವರ್ಷ ವಯಸ್ಸಿನಲ್ಲಿ 'ಕುಳ್ಳ' ಮನೆ ಮಾರುವ ಪರಿಸ್ಥಿತಿಗೆ ತಲುಪಿದ್ದಾರೆ.

ಸಿನಿಮಾಗಾಗಿ ದ್ವಾರಕೀಶ್ ಮಾರಿರುವ ಮನೆಗಳ ಸಂಖ್ಯೆ ಒಂದು ಕೈ ಬೆರಳುಗಳಲ್ಲಿ ಎಣಿಸಿ ಮುಗಿಯಲಾರದಷ್ಟಿವೆ. ಆದರೆ ಹಿಂದೆ ಮನೆ ಮಾರಿದಾಗೆಲ್ಲ ಮತ್ತೊಂದು ಮನೆ ಕಟ್ಟುವ ಉತ್ಸಾಹ, ಹುಮ್ಮಸ್ಸು ಅವರಲ್ಲಿತ್ತು. ಆದರೆ ಅದೇ ಹುಮ್ಮಸ್ಸು ಈ ಎಪ್ಪತ್ತೆಂಟರ ವೃದ್ಧಾಪ್ಯದಲ್ಲಿ ಇರಲಾರದು.

ಬಣ್ಣದ ಲೋಕ ಯಾರನ್ನು ಯಾವಾಗ ಎತ್ತಿ ಮೆರೆಸುತ್ತದೆ, ಯಾರನ್ನು ನೆಲಕ್ಕೆ ಕುಕ್ಕುತ್ತದೆ ಎಂದು ಹೇಳುವುದು ಸಾಧ್ಯವಿಲ್ಲ. ಮುನ್ನೂರಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುವ, ಐವತ್ತು ಸಿನಿಮಾಗಳನ್ನು ನಿರ್ಮಿಸಿರುವ ದ್ವಾರಕೀಶ್ ಅವರು ಸಾಲದ ಸುಳಿಯಿಂದ ತಪ್ಪಿಸಿಕೊಳ್ಳಲು ಮನೆ ಮಾರಿದ್ದಾರೆ. ಮೂರು ಸಿನಿಮಾಗಳನ್ನು ನಿರ್ಮಿಸಿರುವ ಬೆರಳೆಣಿಕೆಯಷ್ಟು ಸಿನಿಮಾಗಳಲ್ಲಿ ನಟಿಸಿರುವ, ಈಗಷ್ಟೇ ಚಿತ್ರರಂಗದಲ್ಲಿ ಚಿಗುರಿಕೊಳ್ಳುತ್ತಿರುವ ರಿಷಭ್ ಶೆಟ್ಟಿ ಆ ಮನೆಯನ್ನು 10.5 ಕೋಟಿ ರೂಪಾಯಿಗಳನ್ನು ಕೊಟ್ಟು ಖರೀದಿಸಿದ್ದಾರಂತೆ!

'ಸಿನಿಮಾ ಎಂಬುದು ಜೂಜು' ಎನ್ನುವುದು ಹಳೆಯ ಮಾತು. ಆದರೆ ಆ ಮಾತನ್ನು ಸತ್ಯವಾಗಿಸುವ ಘಟನೆಗಳಂತೂ ಮತ್ತೆ ಮತ್ತೆ ನಡೆಯುತ್ತಿರುವುದು ಸುಳ್ಳಲ್ಲ. ■